ದಿನಾಂಕಃ **28.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುದುವರೆದ ಪಾಟೀ ಸವಾಲುಃ ಶ್ರೀ ಎ ಎಂ ಆರ್ ವಕೀಲರಿಂದಃ-

ಸರ್ವೆ ನಂ 264ಃ1 ರ ಪೋಡು ಸರಿ ಇಲ್ಲಾ ಎಂದು ನನಗೆ ಈ ದಾವೆಯಲ್ಲಿ ನಿರ್ಬಂಧಕಾಜ್ಞೆ ಹೊರಡಿಸಿದ ನಂತರ ತಿಳಿಯಿತು. 2014 ರಲ್ಲಿ ಆಸ್ತಿಯನ್ನು ಖರೀದಿಸಿದ ಸಮಯದಲ್ಲಿ ದಾವಾ ಆಸ್ತಿಯ ಪೋಡನ್ನು ಪರಿಶೀಲಿಸಿರುವುದಿಲ್ಲ. 2014 ರ ಕ್ರಯಪತ್ರದಂತೆ 261ಃ4 ರ 1 ಎಕರೆ 10 ಗುಂಟೆ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. 8 ನೇ ಪ್ರತಿವಾದಿಯ ಸರ್ವೆ ನಂ 261ಃ5 ರಲ್ಲಿ ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಸರ್ವೆ ನಂ 261ಃ4 ರಲ್ಲಿ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು 8 ನೇ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸರ್ವೆ ನಂ 261ಃ5 ರಲ್ಲಿ ಮನೆಗಳು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆ ಆದೇಶ ದೊರೆತಿರುವುದು ಸರ್ವೆ ನಂ 261ಃ4 ರ ಜಮೀನಿಗೆ ಎಂದರೆ ಸರಿ. ಸರ್ವೆ ನಂ 261ಃ4 ರಲ್ಲಿ ನನಗೆ ನಿರ್ಬಂಧಕಾಜ್ಞೆ ದೊರೆಕಿದ್ದರೂ ಸಹ ಸರ್ವೆ ನಂ 261ಃ5 ರ ಆಸ್ತಿಗೆ ಹೋಗಿ ಅದು ನನಗೆ ಸೇರಿದ ಜಾಗ ಎಂದು ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನಾನು ಕಳೆದ ವರ್ಷ ಅನ್ಯಕ್ರಾಂತ ಮಾಡಿಸಿರುತ್ತೇನೆ. ಅನ್ಯಕ್ರಾಂತ ಮಾಡಿಸಿರುವುದು ಸರ್ವೆ ನಂ 261ಃ4 ರ ಜಮೀನು ಎಂದರೆ ಸರಿ. ಸರ್ವೆ ನಂ 261ಃ4 ರಲ್ಲಿ ಈಗಾಗಲೇ ಮನೆಗಳು ಇರುವ ಕಾರಣ ಸರ್ವೆ ನಂ 261ಃ5 ರ ಆಸ್ತಿಯನ್ನು ಕಬಳಿಸುವ ಸಲುವಾಗಿ ಸರ್ವೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಪೋಡನ್ನು ಅದಲು ಬದಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಈ ದಾವೆ ವಿಚಾರಣೆ ಹಂತದಲ್ಲಿದ್ದರೂ ಸಹ ಎ ಡಿ ಎಲ್ ಆರ್ ರವರಿಂದ ಅಕ್ರಮವಾಗಿ ಆದೇಶ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ವಿಭಾಗ ಕೋರಿ ಅಸಲು ದಾವಾ ಸಂಖ್ಯೆ 477ಃ2018 ನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಈಗಲೂ ವಿಚಾರಣಾ ಹಂತದಲ್ಲಿದೆ ಎಂದರೆ ಸರಿ. ಪ್ರತಿವಾದಿಗಳು ಯಾವತ್ತೂ ಸಹ ಸರ್ವೆ ನಂ 261ಃ4 ರ ಆಸ್ತಿಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಜೀವನೋಪಾಯಕ್ಕಾಗಿ ಬೆಂಗಳೂರಿನ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹೇಗಾದರೂ ಮಾಡಿ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 477ಃ2018 ರ ಪ್ರತಿವಾದ ಪತ್ರದಲ್ಲಿ ಈ ದಾವೆಯ 8 ನೇ ಪ್ರತಿವಾದಿಗೆ ಹೆಣ್ಣು ಮಕ್ಕಳು ಇಲ್ಲಾ ಎಂಬ ವಿಚಾರ ಹೇಳಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗೆ ಪ್ರತಿವಾದಿಗಳು ಯಾವತ್ತೂ ತೊಂದರೆ ನೀಡದಿದ್ದರೂ ಸಹ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರುಃದಃನ್ಯಾಃದಂ.,ರವರು, ಕಡೂರು.